(ಇಂದು ದಿನಾಂಕ 06-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ</u>**

ನಮ್ಮ ಸೊಸೈಟಿಯ ನಿಯಮದ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಸೊಸೈಟಿಯ ನಿಯಮದ ಪ್ರಕಾರ ಸಾಮಾನ್ಯವಾಗಿ ಯಾರಾದರೂ ಸಾಲದ ಅರ್ಜಿ ಸಲ್ಲಿಸಿದಾಗ ಅದನ್ನು ನಮ್ಮ ಸೊಸೈಟಿಯ ಆಡಳಿತ ಮಂಡಳಿಯ ಮುಂದೆ ಇಡಬೇಕಾಗುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಖಾಸಗಿ



ಫಿರ್ಯಾದಿ ಸಲ್ಲಿಸಬೇಕಾದರೆ ಆಡಳಿತ ಮಂಡಳಿಯವರು ಠರಾವು ಮಾಡುತ್ತಾರೆ ಎಂದರೆ ಸರಿ. ಠರಾವು ಮಾಡಿದ್ದರ ಬಗ್ಗೆ ನಮ್ಮ ಮೀಟಿಂಗ್ ರಜಿಸ್ಟರನಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಖಾಸಗಿ ಫಿರ್ಯಾದಿ ಸಲ್ಲಿಸಲು ಮತ್ತು ಸಾಕ್ಷಿ ಹೇಳಲು ಕೊಟ್ಟಂತಹ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಕೇಸನ್ನು ಹಾಕಲು ಮತ್ತು ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ಆಡಳಿತ ಮಂಡಳಿ ಮತ್ತು ಪ್ರಧಾನ ವ್ಯವಸ್ಥಾಪಕರು ಕೊಟ್ಟಿದ್ದಾರೆ. ಆಡಳಿತ ಮಂಡಳಿಯವರು ಮಾಡಿದಂತಹ ಠರಾವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಅಧಿಕಾರ ಪತ್ರವನ್ನು ಏಪ್ರೀಲ್ 2025 ರಲ್ಲಿ ಕೊಟ್ಟಿದ್ದಾರೆ. ನಿ.ಪಿ.5 ಅಧಿಕಾರ ಪತ್ರ. ನಿ.ಪಿ.5 ಕ್ಕೆ ಆಡಳಿತ ಮಂಡಳಿಯವರ ಸಹಿ ಇಲ್ಲ ಎಂದರೆ ಸರಿ. ಪ್ರಧಾನ ವ್ಯವಸ್ಥಾಪಕರಿಗೆ ಅಧಿಕಾರ ಪತ್ರ ಕೊಡುವ ಅಧಿಕಾರ ಇದೆ ಎಂದು ತೋರಿಸುವ ದಾಖಲಾತಿಗಳು ಇಲ್ಲ. ನಿ.ಪಿ.5 ರಲ್ಲಿ ಯಾವ ನ್ಯಾಯಾಲಯದಲ್ಲಿ ಕೇಸನ್ನು ದಾಖಲಿಸಬೇಕು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಸಿವಿಲ್ ನ್ಯಾಯಾಲಯ ಮತ್ತು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಂದು ನಮೂದಿಸಿಲ್ಲ ಎಂದರೆ ಸರಿ. ನಮ್ಮ ಸೊಸೈಟಿಗೆ ಸಂಬಂಧಪಟ್ಟಂತೆ 18 ಶಾಖೆಗಳು ಇವೆ. 18 ಶಾಖೆಗಳಲ್ಲಿ ಸಾಲ ಪಡೆಯುವ ವ್ಯವಸ್ಥೆ ಬೇರೆ ಬೇರೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಬೇರೆ ಬೇರೆ ತಾಲೂಕುಗಳಲ್ಲಿ ಸಾಲ ಪಡೆದ ವ್ಯಕ್ತಿಗಳ ವಿರುದ್ಧ ಆಯಾ ತಾಲೂಕುಗಳ ನ್ಯಾಯಾಲಯಗಳಲ್ಲಿ ಕೇಸನ್ನು ಹಾಕುತ್ತೇವೆ ಎಂದರೆ ಸರಿ. ಆರೋಪಿ ಕಾರವಾರ ಶಾಖೆಯಲ್ಲಿ ಸಾಲ ಕೇಳಿ ಅರ್ಜಿ ಸಲ್ಲಿಸಿದ್ದ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಸಾಲವನ್ನು ಪಡೆದುಕೊಳ್ಳುವಾಗ ಆಧಾರ ಕಾರ್ಡ, ಎಲ್.ಐ.ಸಿ. ಬಾಂಡ್, ಪಡಿತರ ಚೀಟಿ, ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದರು. ಆರೋಪಿ 3 ಎಲ್.ಐ.ಸಿ. ಪಾಲಿಸಿಗಳನ್ನು ಹಾಜರುಪಡಿಸಿದ್ದರು. ಎಲ್.ಐ.ಸಿ. ಪಾಲಿಸಿಯ ಪ್ರಕಾರ ರೂ. 26,000-00, ರೂ.46,000-00 ಮತ್ತು

ರೂ.45,000-00 ರ ಬಾಂಡ್‌ಗಳನ್ನು ಹಾಜರುಪಡಿಸಿದ್ದರು. ನಿ.ಪಿ.6 ರಲ್ಲಿ ಕಾರವಾರ ಶಾಖೆ ಎಂದು ನಮೂದಿಸಲಾಗಿದೆ. ನಮ್ಮ ಸೊಸೈಟಿಯ ನಿಯಮದ ಪ್ರಕಾರ ಸಾಲ ತೆಗೆದುಕೊಂಡ ವ್ಯಕ್ತಿ 3 ಕಂತುಗಳನ್ನು



ಕ್ರಮವಾಗಿ ತುಂಬದೇ ಇದ್ದಾಗ ನಾವು ನೋಟಿಸ್‌ನ್ನು ಕಳುಹಿಸುತ್ತೇವೆ. ಆರೋಪಿ ನಿಯಮದ ಪ್ರಕಾರ ಪ್ರತಿ ತಿಂಗಳು ಸಾಲವನ್ನು ತುಂಬುತ್ತಿದ್ದ ಎಂದರೆ ಸರಿಯಲ್ಲ. ದಿನಾಂಕ 01-02-2022 ರಂದು ಆರೋಪಿ ಸಾಲವನ್ನು ಪಡೆದುಕೊಂಡಿದ್ದಾರೆ. ಆರೋಪಿ ಮಾರ್ಚ 2022 ರಲ್ಲಿ ಒಂದು ಕಂತನ್ನು ಮಾತ್ರ ತುಂಬಿದ್ದು ನಂತರ ಯಾವುದೇ ಕಂತನ್ನು ತುಂಬಿಲ್ಲ. ಆರೋಪಿ ಕಂತುಗಳನ್ನು ನಿಯಮದ ಪ್ರಕಾರ ತುಂಬದೇ ಇದ್ದಾಗ ನಮ್ಮ ಸೊಸೈಟಿಯಿಂದ ನೋಟಿಸ್‌ನ್ನು ಕೊಟ್ಟಿದ್ದೇವೆ. ಆರೋಪಿಗೆ 3 ಅಥವಾ ಅದಕ್ಕಿಂತ ಹೆಚ್ಚಿನ ನೋಟಿಸ್‌ನ್ನು ನಮ್ಮ ಸೊಸೈಟಿಯಿಂದ ಕೊಟ್ಟಿದ್ದೇವೆ. ಸದರಿ ನೋಟಿಸ್‌ಗಳನ್ನು ಕೊಟ್ಟ ನಂತರ ಆರೋಪಿ ಸಾಲದ ಹಣದಲ್ಲಿ ಸುಮಾರು ರೂ. 50,000-00 ಕೊಟ್ಟಿದ್ದಾನೆ. ಆರೋಪಿ ಸದರಿ ರೂ. 50,000-00 ಗಳನ್ನು 3 ಅಥವಾ ಅದಕ್ಕಿಂತ ಹೆಚ್ಚಿನ ತಿಂಗಳುಗಳ ಅಂತರದಲ್ಲಿ ಆರೋಪಿ ಕಟ್ಟಿದ್ದಾನೆ. ಹಣ ತುಂಬಿದ್ದರ ಬಗ್ಗೆ ಸ್ಟೇಟ್‌ಮೆಂಟ್ ಆಫ್ ಅಕೌಂಟ್‌ನಲ್ಲಿ ತೋರಿಸಿದ್ದೇವೆ ಎಂದರೆ ಸರಿ. ಆರೋಪಿ ಹಣ ತುಂಬಿದ್ದಾನೆ ಎಂದು ತೋರಿಸುವ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್‌ನ್ನು ಹಾಜರುಪಡಿಸಿದ್ದೇನೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಮುಂದುವದರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ